ಯಶಸ್ಸಿನ ಕಾರಣಗಳನ್ನಾಗಲೀ, ಲೂಪ್ ಹೋಲ್ಸ್‌ಗಳನ್ನಾಗಲೀ ಅವನೆಂದೂ ಹೊರಕ್ಕೆ ಲೀಕ್ ಮಾಡಿದವನಲ್ಲ. ವಿಶ್ವಾಸಕ್ಕೆ, ನಂಬಿಕೆಗೆ ಬೆಲೆ ಕಟ್ಟಲಾದೀತೆ? ಹಾಗಾಗಿಯೇ ದಾದರ್‌ನ ಶಿವಾಜಿ ಪಾರ್ಕ್ ಹತ್ತಿರದ ಸುಸಜ್ಜಿತ ಅಪಾರ್ಟ್‌ಮೆಂಟ್‌ನಲ್ಲಿ ಒಂದು ಫ್ಲ್ಯಾಟನ್ನು ಶಿರೋಡ್ಕರನಿಗೆ ಗಿಫ್ಟಾಗಿ ಕೊಟ್ಟಿರುವನಲ್ಲದೆ ಶಿರೋಡ್ಕರನ ತಂಗಿಗೆ ಮೆಡಿಸಿನ್ ಎಂಡಿ ಮಾಡಲು ಸಂಪೂರ್ಣ ಖರ್ಚನ್ನು ಗುನ್ನಾಲಾಲನೇ ವಹಿಸಿಕೊಂಡಿದ್ದಾನೆ. ನಾಲ್ಕೇ ದಿನದಲ್ಲಿ ಹರ್ಷವರ್ಧನ್ ಶಿರೋಡ್ಕರ್ ಡಾಕ್ಟರ್ ಮನೋರಂಜನಿಯ ಅಪಾಯಿಂಟ್ಮೆಂಟ್ ಫಿಕ್ಸ್ ಮಾಡಿದ್ದ.

ಮಫತ್ಲಾಲ್ ಗುನ್ನಾಲಾಲ್ ಡಾಕ್ಟರ್ ಮನೋರಂಜನಿಯ ಚೇಂಬರ್‌ನಲ್ಲಿ ಕುಳಿತಿದ್ದ. ಹಿತವಾದ ಮೌನದೊಳಗಿಂದ ಅತಿ ಸಣ್ಣನೆಯ ಮಧುರವಾದ ಸಂಗೀತ ತೇಲಿ ಬರುತ್ತಿತ್ತು. ಘಮ್ಮನೆಯ ತೆಳುವಾದ ಪರಿಮಳ ಹರಡಿಕೊಂಡು ಒಂದು ರೀತಿಯ ಅಲೌಕಿಕ ಅನುಭೂತಿಯಲ್ಲಿ ತೇಲುತ್ತಿರುವಂತೆ ಅನುಭವವಾಗಿತ್ತು ಗುನ್ನಾಲಾಲನಿಗೆ. ಕ್ಷಣ ತಾನು ಅಲ್ಲಿಗೆ ಬಂದ ಕಾರಣವನ್ನೇ ಮರೆತವನು ಮರುಕ್ಷಣವೇ ಎಚ್ಚರಗೊಂಡವನಾಗಿದ್ದ. ಚೇಂಬರಿನ ಒಳಬಾಗಿಲಿನಿಂದ ಡಾಕ್ಟರ್ ಮನೋರಂಜನಿ ಪ್ರತ್ಯಕ್ಷವಾಗಿದ್ದರು. ಸುಮಾರು ನಲವತ್ತೈದು ವರ್ಷದ ನಿರಾಭರಣ ಸುಂದರಿ. ಸಿನಿಮಾ ತಾರೆಯಂತೆಯೇ ಕಂಗೊಳಿಸುತ್ತಿದ್ದ ಆಕೆ ಗುನ್ನಾಲಾಲನಿಗೆ ಕೈಮುಗಿದಿದ್ದರು. ಪ್ರತಿಯಾಗಿ ಗುನ್ನಾಲಾಲ್ ಕೂಡ ಎರಡೂ ಕೈ ಜೋಡಿಸಿದ್ದರು.

'ನಿನ್ನೆ ಸಂಜೆ ಫಿಲ್ಮ್ ಸ್ಟಾರ್ ರೇಖಾ ಬಂದಿದ್ದರು. ತುಂಬಾ ಖಿನ್ನತೆಗೆ ಒಳಗಾಗಿದ್ದರು. ಎಪ್ಪತ್ತು ವರ್ಷ ವಯಸ್ಸು ಈಗ ಆಕೆಗೆ. ವಯಸ್ಸು ಮತ್ತು ಸೌಂದರ್ಯವನ್ನು ತಮ್ಮೊಂದಿಗೆ ಯಾರಾದರೂ ನಿರಂತರವಾಗಿ ಕೊಂಡೊಯ್ಯಲು ಸಾಧ್ಯವಾಗುತ್ತದ? ಈ ಸತ್ಯವನ್ನು ಆಕೆಗೆ ತಿಳಿಹೇಳಲು ಸಾಕು ಸಾಕಾಯಿತು. ಮನುಷ್ಯ ಸತ್ಯವನ್ನು ಒಪ್ಪಿಕೊಂಡಾಗ ಸುಖವಾಗಿರುತ್ತಾನೆ. ಸತ್ಯವನ್ನು ಒಪ್ಪಿಕೊಳ್ಳಲಾಗದವರು ಖಿನ್ನತೆಗೆ ಒಳಗಾಗಿ ಮಾನಸಿಕವಾಗಿ ಒಳಗೊಳಗೆ ಬೆಂದುಹೋಗುತ್ತಾರೆ. ಬೈ ದಿ ಬೈ ನಿಮ್ಮ ಹೆಸರು ಮಫತ್ಲಾಲ್ ಗುನ್ನಾಲಾಲ್ ಅಲ್ಲವೆ?' ಆಕೆಯ ದೇಹ ಸಿರಿಯಂತೆ ಕಂಠಸಿರಿಯೂ ಶೋಭಾಯಮಾನವಾಗಿತ್ತು.

'ಹೌದು ಡಾಕ್ಟರ್' ಗುನ್ನಾಲಾಲ್ ತಲೆಯಾಡಿಸಿದ್ದ.

'ನೀವು ಮಫತ್ಲಾಲ್ ಗ್ರೂಪಿನವರ?' ಡಾಕ್ಟರ್ ನಗುತ್ತಾ ಕೇಳಿದ್ದರು.

'ಅಲ್ಲ ಮೇಡಮ್' ಏಕೊ ಗಂಟಲು ಹಿಡಿದಂತಾಯಿತು ಗುನ್ನಾಲಾಲನಿಗೆ.

'ಮತ್ತೆ ಮಫತ್ಲಾಲ್ ಎನ್ನುವ ಹೆಸರನ್ನು ನಿಮ್ಮ ತಂದೆ ತಾಯಿ ಇಟ್ಟಿದ್ದ?'

'ಅಲ್ಲ ಮೇಡಮ್ ನಾನೆ ಇಟ್ಟುಕೊಂಡಿದ್ದು' ಎಂದು ಗುನ್ನಾಲಾಲ್ ತನ್ನ ಅಂದಿನ ಕಾಲದ ಸ್ಟೋರಿಯನ್ನು ಸಂಕ್ಷಿಪ್ತವಾಗಿ ಹೇಳಿದ್ದ.

'ಏನು ಓದಿರುವಿರಿ?' ಈ ಪ್ರಶ್ನೆಯನ್ನು ನಿರೀಕ್ಷಿಸಿರಲ್ಲ ಗುನ್ನಾಲಾಲ್. ತನ್ನ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುವಾಗ ವಿದ್ಯಾಭ್ಯಾಸದ ಸಂಗತಿಯನ್ನು ಹೇಳಿರಲಿಲ್ಲ.

'ಒಂಬತ್ತನೆಯ ತರಗತಿ ಇನ್‌ಕಂಪ್ಲೀಟ್ ಡಾಕ್ಟರ್. ನಾನು ಮುಂಬಯಿಗೆ ಓಡಿ ಬಂದಾಗ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದೆ' ಸತ್ಯ ಹೇಳಿದ್ದ ಗುನ್ನಾಲಾಲ್.

'ಪ್ರತಿಭೆ ಮತ್ತು ಶ್ರೀಮಂತಿಕೆಗೆ ವಿದ್ಯಾಭ್ಯಾಸ ಕಡ್ಡಾಯ ಮಾನದಂಡವೇನೂ ಅಲ್ಲ ಬಿಡಿ. ಹಾಗೆ ನೋಡಿದರೆ ಅನೇಕ ಸಿನಿಮಾ ತಾರೆಯರಿಗಿಂತ, ಕ್ರಿಕೆಟ್ ಆಟಗಾರರಿಗಿಂತ, ರಾಜಕಾರಣಿಗಳಿಗಿಂತ ನೀವೇ ಹೆಚ್ಚು ಓದಿದ್ದೀರಿ. ಮುಂಬಯಿಯ ಬೆಳ್ಳಿತೆರೆಯನ್ನು ರಾಣಿಯಂತೆ ಆಳಿದ ಮಧುಬಾಲ ಏನೂ ಓದಿರಲಿಲ್ಲ. ಆದರೆ ಎಷ್ಟು ಪ್ರತಿಭೆಯಿತ್ತು ಅವಳಲ್ಲಿ. ಎಷ್ಟೊಂದು ಹದಿಹರೆಯದ ಹೃದಯಗಳನ್ನು ಚೂರು ಮಾಡಿಬಿಟ್ಟಳು. ಏನೋ ಹೇಳಲು ಹೋಗಿ ಏನೋ ಹೇಳುತ್ತಿರುವೆನೆಂದು ತಿಳಿಯಬೇಡಿ. ಇಲ್ಲಿ ಎಲ್ಲವೂ ಎಲ್ಲದಕ್ಕೂ ಸಂಬಂಧಪಟ್ಟಿರುತ್ತವೆ. ಇವತ್ತು ಇಡೀ ಜಗತ್ತಿನಲ್ಲಿ ಐಡೆಂಟಿಟಿ ಕ್ರೈಸಿಸ್ ಅತ್ಯಂತ ವ್ಯಾಪಕವಾಗಿ ಮನುಷ್ಯನನ್ನು ಕಾಡುತ್ತಿದೆ. ಅದೃಷ್ಟವಶಾತ್ ಇದರ ಸಾಂದ್ರತೆ ಅನಕ್ಷರಸ್ಥರಲ್ಲಿ, ಬಡವರಲ್ಲಿ ಕಡಿಮೆಯಿದೆ. ಪ್ರಾರಂಭದಲ್ಲಿ ನಿಮ್ಮಲ್ಲಿ ಅಭದ್ರತೆ ಇತ್ತೇ ವಿನಃ ಐಡೆಂಟಿಟಿ ಕ್ರೈಸಿಸ್ ಇರಲಿಲ್ಲ. ಈಗಲೂ ನಿಮ್ಮಲ್ಲಿ ಈ ಕ್ರೈಸಿಸ್ ಇದ್ದೇ ಇದೆ. ನಿಮ್ಮದೇ ಬಿಸಿನೆಸ್ ಎಸ್ಟಾಬ್ಲಿಷ್ಮೆಂಟ್ ತುಂಬಾನೇ ಉತ್ತಮ ಮತ್ತು ಉತ್ತುಂಗ ಸ್ಥಿತಿಯಲ್ಲಿದ್ದರೂ ನೀವಿನ್ನೂ ಮಫತ್ಲಾಲ್ ಹೆಸರನ್ನು ನಿಮ್ಮ ಮೂಲ ಹೆಸರಿನೊಂದಿಗೆ ಅಂಟಿಸಿಕೊಂಡಿದ್ದೀರಿ ಮತ್ತು ನಿಜ ಹೇಳಬೇಕೆಂದರೆ ಮಫತ್ಲಾಲ್ ಹೆಸರಿನೊಂದಿಗೆ ನಿಮ್ಮ ಒರಿಜಿನಲ್ ಹೆಸರು ಪೇಲವವಾಗಿ, ಶಕ್ತಿಹೀನವಾಗಿ ಕಾಣುತ್ತಿದೆ. ನಿಮ್ಮ ವ್ಯಾಪಾರ ವಹಿವಾಟಿಗೆ ಮಫತ್ಲಾಲ್ ಹೆಸರು ಇಲ್ಲದ ಮೇಲೆ ನಿಮ್ಮ ಹೆಸರಿನೊಂದಿಗೆ ನೀವ್ಯಾಕೆ ಅದನ್ನು ಉಳಿಸಿಕೊಂಡಿರುವಿರಿ. ಇದನ್ನೇ ಹಂಗು ಎಂದು ಕರೆಯುವುದು' ಡಾಕ್ಟರ್ ಮನೋರಂಜನಿ ಮಾತು ನಿಲ್ಲಿಸುವುದರೊಂದಿಗೆ ಅಟೆಂಡರ್ ಎರಡು ಫ್ರೆಶ್ ಮ್ಯಾಂಗೊ ಜ್ಯೂಸ್ ಗ್ಲಾಸುಗಳನ್ನು ಇಟ್ಟು ಹೋಗಿದ್ದಳು.

ಗುನ್ನಾಲಾಲ್ ಜ್ಯೂಸ್ ಕುಡಿದು ಗ್ಲಾಸ್ ಇಟ್ಟು ಜ್ಞಾನೋದಯ ಆದವನಂತೆ 'ಡಾಕ್ಟರ್ ನೀವು ಹೇಳುತ್ತಿರುವುದು ನಿಜ. ಇನ್ನು ಮುಂದೆ ಮಫತ್ಲಾಲ್ ಎನ್ನುವುದನ್ನು ನನ್ನ ಹೆಸರಿನ ಹಿಂದು ಮುಂದು ಅಂಟಿಸಿಕೊಳ್ಳುವುದಿಲ್ಲ' ಎಂದಿದ್ದ.

'ಗುಡ್, ಅದರಿಂದ ನಿಮ್ಮ ಹೆಸರಿಗೆ ಇರುವ ಭಾರ ಕಡಿಮೆಯಾಗುತ್ತದೆ. ನನ್ನ ಚಿಕ್ಕಪ್ಪನ ಮಗ ಕಿಶೋರ್ ಚೌಬೆ ದೆಹಲಿಯಿಂದ ಫೋನ್ ಮಾಡಿದ್ದ. ನೀವು ಎರಡು ಗಂಟೆ ಕಾಲ ಇಲ್ಲಿ ಮನಬಿಚ್ಚಿ ಮಾತನಾಡಬಹುದು ಮೆದುಳಿಗೆ ಸಂಬಂಧಪಟ್ಟ ವಿಷಯಗಳನ್ನು. ಜಗತ್ತಿನ ಶೇಕಡ ಎಂಬತ್ತು ಪರ್ಸೆಂಟ್ ಜನ ಇಂದು ವಿವಿಧ ಮಾನಸಿಕ ಕಾಯಿಲೆಗಳಿಂದ ನರಳುತ್ತಿದ್ದಾರೆ. ಅವರಲ್ಲಿ ಉಳ್ಳವರದ್ದೇ ಸಿಂಹಪಾಲು. ನೀವು ನಿಮಗೆ ಬಿದ್ದ ಕನಸಿನಿಂದ ಪ್ರಾರಂಭಿಸಿ ಏನೇ ಅನುಮಾನಗಳಿದ್ದರೂ ಕೇಳಬಹುದು' ಡಾಕ್ಟರ್ ಮನೋರಂಜನಿ ಅತ್ಯಂತ ಸಾವಧಾನದಿಂದ ಕನ್ವಿನ್ಸಾಗಿ ಮಾತನಾಡಿದ್ದರು. ಗುನ್ನಾಲಾಲ್ ಸುಮಾರು ಹತ್ತು ನಿಮಿಷ ತನಗೂ ತನ್ನ ಮೊಮ್ಮಗನಿಗೂ ಬಿದ್ದ ಒಂದೇ ಕನಸಿನ ಬಗ್ಗೆ ಮತ್ತು ತದನಂತರದ ನಡೆದ ವಿದ್ಯಮಾನಗಳ ಬಗ್ಗೆ ಮಾತನಾಡಿ ಡಾಕ್ಟರ್ ಮಾತಿಗೆ ಕಿವಿ ತೆರೆದ.

'ಮಿಸ್ಟರ್ ಗುನ್ನಾಲಾಲ್ ನಿಮಗೂ, ನಿಮ್ಮ ಮೊಮ್ಮಗನಿಗೂ ಒಂದೇ ಸಮಯದಲ್ಲಿ ಸೇಮ್ ಟು ಸೇಮ್ ಒಂದೇ ಕನಸು ಬಿದ್ದಿರುವುದು ನಿಜಕ್ಕೂ ತುಂಬಾ ವಿಸ್ಮಯಕಾರಿಯಾದ ಸಂಗತಿಯೇ ಸರಿ. ನನ್ನ ಇದುವರೆಗಿನ ವೈದ್ಯಕೀಯ ಸೇವೆಯಲ್ಲಿ, ಸಂಶೋಧನೆಯಲ್ಲಿ ಇಂಥ ಆಶ್ಚರ್ಯಕರವಾದ ಸಂಗತಿಯನ್ನು ಕೇಳಿರಲಿಲ್ಲ. ಜಗತ್ತಿನಲ್ಲಿ ಇಂಥದ್ದೊಂದು ವಿದ್ಯಮಾನ ನಡೆದಿರುವುದು ಕೂಡ ನನ್ನ ಅಧ್ಯಯನ ಸಂದರ್ಭದಲ್ಲಿ ಗಮನಕ್ಕೆ ಬಂದಿಲ್ಲ. ಆದರೂ ಇದು ಕೂಡ ಒಂದು ಕೊ ಇನ್ಸಿಡೆನ್ಸೆಂದೇ ತಿಳಿಯಬೇಕಾಗುತ್ತದೆ. ಸದ್ಯಕ್ಕೆ ವಿಜ್ಞಾನಕ್ಕಿರುವ ಲಿಮಿಟೇಶನ್ ಅದು'. ಡಾಕ್ಟರ್ ಮನೋರಂಜನಿಯ ಮಾತುಗಳಿಗೆ ಅಚ್ಚರಿಯಿಂದ ತಲೆತೂಗಿದ ಗುನ್ನಾಲಾಲ್ ಉತ್ತೇಜಿತನಾಗಿ 'ಡಾಕ್ಟರ್ ಕನಸುಗಳು ಏಕೆ ಬೀಳುತ್ತವೆ ಮತ್ತು ಅವುಗಳಿಂದ ಸಂದೇಶವೇನಾದರೂ ನಾವು ನಿರೀಕ್ಷಿಸಬಹುದೆ?' ಎಂದು ಕೇಳಿದ್ದ.

'ಕನಸುಗಳು ಏಕೆ ಬೀಳುತ್ತವೆಂಬ ಖಚಿತವಾದ ಕಾರಣ ಇದುವರೆಗೆ ಯಾರಿಗೂ ಅತ್ಯಂತ ನಿಖರವಾಗಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಅವುಗಳಿಗೊಂದು ನಿರ್ದಿಷ್ಟವಾದ ವ್ಯಾಖ್ಯಾನವನ್ನು ಇದುವರೆಗೂ ಎಸ್ಟಾಬ್ಲಿಷ್ ಮಾಡಲು ಸಾಧ್ಯವಾಗಿಲ್ಲ. ಮನುಷ್ಯನ ತೃಪ್ತಿಗೊಳ್ಳದ ಬಯಕೆಗಳು ಮಲಗಿದ್ದಾಗ ಸುಪ್ತ ಮನಸ್ಸಿನಲ್ಲಿ ವಿವಿಧ ಆಕಾರಗಳನ್ನು ಪಡೆಯುತ್ತವೆ. ನಿಮಗೆ ಬುದ್ಧಿ ತಿಳಿದಾಗಿನಿಂದ ಸುಮಾರು ಎಷ್ಟು ಕನಸುಗಳು ಬಿದ್ದಿರಬಹುದು ಮತ್ತು ಅವುಗಳಲ್ಲಿ ನಿಮಗೆ ಎಷ್ಟು ಕನಸುಗಳು ನೆನಪಿವೆ?' ಡಾಕ್ಟರ್ ಮನೋರಂಜನಿಯ ಪ್ರಶ್ನೆಗೆ ತುಂಬಾನೇ ತಡಕಾಡುವಂತಾಯಿತು ಗುನ್ನಾಲಾಲನಿಗೆ.

'ಡಾಕ್ಟರ್ ಸರಿಯಾಗಿ ನೆನಪಿಲ್ಲ. ನಾನು ಊರಿನಲ್ಲಿದ್ದಾಗ ಪದೇ ಪದೇ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ ಕನಸು ಮತ್ತು ಧಾರಾವಿಯ ಸ್ಲಂನಲ್ಲಿದ್ದಾಗ ರಾಶಿ ರಾಶಿ ಚಿಲ್ಲರೆ ಕಾಸು ಬೀಳುತ್ತಿದ್ದ ಕನಸು ಮಾತ್ರ ನೆನಪಿದೆ. ಅದು ಬಿಟ್ಟರೆ ನನಗೂ ನನ್ನ ಮೊಮ್ಮಗನಿಗೂ ಬಿದ್ದ ಕನಸೇ ಸ್ಪಷ್ಟವಾಗಿ ನೆನಪಿರುವುದು' ಗುನ್ನಾಲಾಲ್ ಸರಿಯಾಗಿಯೇ ಹೇಳಿದ್ದ. ಅವನಿಗೆ ಊರಿನಲ್ಲಿರುವಾಗ ಚಲಿಸುವ ರೈಲನ್ನು ಓಡಿ ಹೋಗಿ ಹತ್ತಿದಂತೆ, ರೈಲಿನ ಬಾಗಿಲಿನಲ್ಲಿ ನಿಂತು ಪ್ರಯಾಣಿಸಿದಂತೆ, ಚಲಿಸುವ ರೈಲಿನಲ್ಲಿ ಒಂದು ಕೊನೆಯಿಂದ ಇನ್ನೊಂದು ಕೊನೆಗೆ ಬೋಗಿಗಳಲ್ಲಿ ಓಡಾಡಿದಂತೆ ಕನಸುಗಳು ಬೀಳುತ್ತಲೇ ಇದ್ದವು. ಧಾರಾವಿಯ ಸ್ಲಂನಲ್ಲಿರುವಾಗ ಎಲ್ಲಂದರಲ್ಲೆ ಚಿಲ್ಲರೆ ಕಾಸುಗಳು ರಾಶಿ ರಾಶಿ ಬಿದ್ದಂತೆ ಕನಸು ಆಗಾಗ ಬೀಳುವುದು ಬಿಟ್ಟರೆ ಮಿಕ್ಕೆಲ್ಲ ಕನಸುಗಳು ಅಸ್ಪಷ್ಟವಾಗಿ ಇರುತ್ತಿದ್ದವಲ್ಲದೆ ಮನಸ್ಸಿನಲ್ಲಿ